ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
<u>ಸಿ.ಸಿ.1418/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜು ಜಿ.ಕೆ. | ಪಿ.ಡಬ್ಲ್ಯೂ.7 |
| ತಂದೆಯ ಹೆಸರು | : | ಲೇಟ್ ಕೆ.ಎಂ.ಎಸ್.ಗಂಗಾಧರಯ್ಯ | ಸಿ.ಡಬ್ಲ್ಯೂ.16 |
| ವಯಸ್ಸು | : | 43 ವರ್ಷ | |
| ವೃತ್ತಿ | : | ಪಿ.ಎಸ್.ಐ, ಕೊಪ್ಪ ಪೊಲೀಸ್ ಠಾಣೆ | |
| ವಾಸ | : | ಕೊಪ್ಪ | |

<u>ದಿನಾಂಕಃ 22-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು ಏಪ್ರಿಲ್ 2019 ರಿಂದ ನವೆಂಬರ್ 2019 ರವರೆಗೆ ಚಿಕ್ಕಮಗಳೂರಿನ ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ02.11.2019 ರಂದು ಚಾಸಾ-15 ರವರಿಂದ ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಪಡೆದಿರುತ್ತೇನೆ. ಅದೇ ದಿನ 1 ನೇ ಆರೋಪಿ ವಸೀಂ ಅಲಿಯಾಸ್ ಚಚ್ಚಿ ವಸೀಂರವರ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಸದರಿ ಸ್ವಇಚ್ಛಾ ಹೇಳಿಕೆಯನ್ನು ನಿಪಿ-21 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-21(ಎ) ಇರುತ್ತದೆ. ಆರೋಪಿಯ ಸಹಿ ಇದ್ದು ಅದನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. ದಿಃ03.11.2019 ರಂದು ಚಾಸಾ-2 ರಿಂದ ಚಾಸಾ-10

ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ06.11.2019 ರಂದು 2 ನೇ ಹೆಚ್ಚುವರಿ ಸೀನಿಯರ್ ಸಿವಿಲ್ ಜಡ್ಜ್ ರವರ ಮುಂದೆ ಅಮಾನತ್ತುಪಡಿಸಿದ ಮುದ್ದೆ ಮಾಲುಗಳನ್ನು ಇನ್ ವೆಂಟರಿ ಮಾಡಿಸಿರುತ್ತೇನೆ. ಇನ್ ವೆಂಟರಿ ಸಮಯದಲ್ಲಿ ತೆಗೆದ 2 ಭಾವಚಿತ್ರಗಳನ್ನು ಹಾಗೂ ಅನೆಕ್ಸರ್ 1 ಮತ್ತು 2 ರ ಜೆರಾಕ್ಸ್ ಪ್ರತಿಗಳನ್ನು ಒಟ್ಟಾಗಿ ನಿಪಿ-22 ಎಂದು ಗುರುತಿಸಲಾಯಿತು.

ದಿಃ07.11.2019 ರಂದು ಚಾಸಾ-6 ರವರು ನೀಡಿದ 65(ಬಿ) ದೃಢೀಕರಣ ಪತ್ರವನ್ನು ತೆಗೆದುಕೊಂಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-19(ಸಿ) ಇರುತ್ತದೆ. ದಿಃ12.11.2019 ರಂದು ನಾನು ವರ್ಗಾವಣೆಗೊಂಡಿದ್ದರಿಂದ ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಪಿ.ಎಸ್.ಐ ತೇಜಸ್ವಿವರಿಗೆ ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ನೋಡಿ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. (ಈ ದಿನ 2 ನೇ ಆರೋಪಿಯು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆತನನ್ನು ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ).

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-</u>

ದಿಃ02.11.2019 ರಂದು ನಾನು ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಕಡತದಲ್ಲಿ ಆರೋಪಿತರ ಭಾವಚಿತ್ರ ಇರುವ ದಾಖಲೆಯನ್ನು ಸಾಕ್ಷಿದಾರರಿಗೆ ತೋರಿಸಿ

ಅದರಲ್ಲಿ 1 ನೇ ಆರೋಪಿ ಎಂದು ತೋರಿಸಿರುವ ವ್ಯಕ್ತಿ ಹಾಗೂ ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಬೇರೆ ಬೇರೆ ಇರುತ್ತಾರೆ ಎಂದು ಕೇಳಲಾಗಿ ಸಾಕ್ಷಿದಾರರು ಸರಿಯಲ್ಲ ಎಂದು ನುಡಿಯುತ್ತಾರೆ. ನಾನು 1 ನೇ ಆರೋಪಿಯ ಸ್ವಇಚ್ಚಾ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಚಾಸಾ-2 ರಿಂದ ಚಾಸಾ-10 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮುಂದೆ ಇನ್ ವೆಂಟರಿ ಮಾಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫೋಟೋಗಳ ಭಾವಚಿತ್ರಗಳನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದೃಢೀಕರಣ ಪತ್ರವನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

C.C.No.1418/2021
PW-7 CW-16

ಎಸ್‌ಆರ್‌ಃ